ಶ್ರೀ ಗಂಗಾಧರ ನಾಪೋಷಿ.—ಈಗ ಈ ಬಸ್ ರೂಟ್‌ಗಳನ್ನು ಯಾವಾಗ ಸಂಪೂರ್ಣವಾಗಿ ಮನಾಪಲೈಜ್ ಮಾಡಿಕೊಳ್ಳುತ್ತೀರಿ? ಖಾನಗೀ ಬಸ್ಸುಗಳನ್ನು ಯಾವಾಗ ಸಂಪೂರ್ಣವಾಗಿ ನಿಲ್ಲಿಸುತ್ತೀರಿ?

Mr. SPEAKER.—How does it arise as a supplementary? In a Debate it may not be irrelevant, but supplementaries must be confined to the points raised in the main question.

ಶ್ರೀ ಗಂಗಾಧರ ನಾಪೋಷಿ.—ಹೀಗಾದರೆ ನಮ್ಮ ರೆವೆನ್ಯೂ ಯಾವಾಗ ಜಾಸ್ತಿಯಾಗುವುದು?

ಶ್ರೀ ಡಿ. ದೇವರಾಜ ಅರಸ್.—ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಎರ್ನಾ ರೂಟುಗಳನ್ನೂ ಸಂಪೂರ್ಣವಾಗಿ ಮನಾಪಲೈಜ್ ಮಾಡುತ್ತೇವೆ. ಆ ಅಭಿಪ್ರಾಯವಿದೆ.

———

Weaving Co-operative Societies in Mandya District

*Q.—45. Sri N. NANJE GOWDA (Krishnarajpet).—

Will the Government be pleased to state :—

(*a*) the number and names of Weaving Co-operative Societies in Mandya District together with the names of places where they are situated (Talukwise infomation may be furnished) ;

(*b*) the number of members and the amount of share capital of each of the above Societies ;

(*c*) the amount invested by them in each of the above Societies by way of cash or kind ;

(*d*) the number of powerlooms provided to those Societies together with the cost thereof ;

(*e*) the number of looms that are working at present ?

A.—Sri KONDAJJI BASAPPA (Deputy Minister for Co-operation).—

(*a*) (*b*) and (*c*) *Vide* statement given below.

(*d*) 125. Cost—Rs. 3,22,500.

(*e*) 44.

STATEMENT

Sl. No.	Name of the Society	Where situated	No. of members	The amount of share capital	The amount invested by the members
1	2	3	4	5	6
				Rs. nP.	Rs. nP.
1	Cotton Weavers' Co-op. Society.	Mandya.	768	5,734.12	22,226.88
2	Do ...	B. Gowdagere, Mandya Taluk.	154	886.94	4,490.00
3	Do ...	Keregodu, Do	220	3,460.00	5,545.86
4	Do ...	K. K. Halli, Maddur Taluk.	268	640.00	27,072.03
5	Do ...	Somanahalli Do	156	781.00	23,452.00
6	Do ...	Kadalur Do	129	1,710.00	17,203.79
7	Do ...	Yaraganahalli Do	100	600.00	3,051.00
8	Do ...	Maramagere (Koppa) Do	179	826.00	21,313.79
9	Do ...	Kodavala (Old), S.R. Patna Tq.	218	2,790.20	65,536.47
10	Do ...	Kodavala (New) Do	250	1,581.25	7,702.18
11	Do ...	Kikkeri K. R. Pet Taluk.	282	3,500.00	87,704.10
12	Silk Do ...	Kikkeri Do	95	1,262.50	14,217.55
13	Cotton W. C. S. ...	Hosaholalu Do	212	4,500.00	30,505.77
14	Do ...	Ooginahalli Do	144	1,800.00	11,454.00
15	Do ...	Melkote, Pandavapur Taluk.	383	4,887.97	1,18,166.00
16	Do ...	Talagawadi, Malavalli Taluk.	194	1,693.00	20,304.43
17	Do ...	Malavalli Do	105	1,312.50	3,797.10
18	Do ...	Bellur, Nagamangala Taluk	83	825.00	7,689.52
19	Wool W. C. Society ...	Satanur, Mandya Taluk	124	620.00	—
20	Do ...	Basaralu Do	80	400.00	12,869.51
21	Do ...	Nagamangala, Nagamangala. Tq.	165	825.00	4,418.83
22	Do ...	M. H. Koppalu, Malavalli Tq.	82	820.00	—

ಶ್ರೀ ಎನ್. ನಂಜೇಗೌಡ.—125 ಮಗ್ಗಗಳನ್ನು ಸರಬರಾಯಿ ಮಾಡಲಾಗಿದೆಯೆಂದು ಹೇಳಿದ್ದರೂ ಅಲ್ಲಿ ಕೇವಲ 44 ಮಗ್ಗಗಳು ಮಾತ್ರ ಕೆಲಸಮಾಡುತ್ತಿರಲು ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರಿಗೆ ಕೊಡತಕ್ಕ ಒಂದು ಸಾವಿರ ರೂಪಾಯಿಗಳ ಸಾಲ ಬಹಳ ಕಡಮೆ ಎಂಬುದು ಒಂದು ಕಾರಣ. ಇದೇ ವಿಚಾರದಲ್ಲಿ ನಮ್ಮ ಹ್ಯಾಂಡ್‌ಲೂಂ ಬೋರ್ಡಿನವರೂ ಸರ್ಕಾರಕ್ಕೆ ಶಿಫಾರ್ಸ್ ಮಾಡಿದ್ದಾರೆ. ಇನ್ನು ಕೆಲವರಿಗೆ ಕರೆಂಟ್ ಸಿಕ್ಕಿಲ್ಲ, ಈ ಕಾರಣದಿಂದ ಸರಬರಾಯಿ ಮಾಡಿರತಕ್ಕ ಲೂಮುಗಳೆಲ್ಲಾ ಕೆಲಸಮಾಡುತ್ತಿಲ್ಲ.

ಶ್ರೀ ಎನ್. ನಂಜೇಗೌಡ.—ಎಲೆಕ್ಟ್ರಿಸಿಟಿ ಸಪ್ಲೈ ಮಾಡಿದ ನಂತರ ಇವುಗಳನ್ನು ಸಪ್ಲೈ ಮಾಡ ಬೇಕಾಗಿತ್ತಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಕೆಲವರು ಎಲೆಕ್ಟ್ರಿಸಿಟಿಯು ಬಹುಬೇಗ ತಮಗೆ ದೊರೆಯುತ್ತದೆಂಬ ಭಾವನೆಯ ಮೇಲೆ ಲೂಮುಗಳನ್ನು ತೆಗೆದುಕೊಂಡಿರುತ್ತಾರೆ, ಹೀಗಾಗಿ ಕೆಲವು ಖಡಲಾಗಿವೆ.

ಶ್ರೀ ಎನ್. ನಂಜೇಗೌಡ.—ಇವುಗಳನ್ನು ಸೊಸೈಟಿಗಳ ಮೂಲಕ ಸಪ್ಲೈ ಮಾಡಿದ್ದೀರೋ ಅಥವಾ ಬೇರೆಯವರಿಂದ ಸರಬರಾಯಿ ಮಾಡಿಸಿದ್ದೀರೋ ?

ಶ್ರೀ ಕೊಂಡಜ್ಜಿ ಬಸಪ್ಪ.—ಸೊಸೈಟಿಗಳ ಮೂಲಕ.

ಶ್ರೀ ಎಚ್. ನಂಜೇಗೌಡ.—ಕಿಕ್ಕೇರಿ ಗ್ರಾಮಕ್ಕೆ ವಿದ್ಯುಚ್ಛಕ್ತಿಯಿಲ್ಲದೆ ಇದನ್ನು ಸಪ್ಲೈ ಮಾಡಿರುವುದರಿಂದ ಆ ಜನರಿಗೆ ತುಂಬಾ ತೊಂದರೆಯಾಗಿದೆ ಎಂಬುದು ಗೊತ್ತಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದಕ್ಕೆ ನಾನಾಗಲೇ ಕಾರಣ ಹೇಳಿದೆನು.

Mr. SPEAKER.—Besides the co-operatives, individuals have been given looms but they have not been able to get power. That hardship is there. That is what is suggested.

ಶ್ರೀ ಬಿ. ಕೆ. ಪುಟ್ಟಯ್ಯ.—ಈಗ ಅಲ್ಲಿ ಆ 44 ಲೂಮುಗಳೂ ರನ್ನಾಗುತ್ತಿಲ್ಲವೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವು ರನ್ನಾಗುತ್ತಿವೆ.

ಶ್ರೀ ಟಿ. ಜಿ. ಸತ್ಯನಾರಾಯಣ.—ಬಳ್ಳಾರಿಯಲ್ಲಿ ಈ ಲೂಮುಗಳನ್ನು ಹಾಕಲು ಕಟ್ಟಡ ವಗೈರೆಗಳೆಲ್ಲಾ ಸಿದ್ಧವಾಗಿದ್ದರೂ ಕೆಲವು ಭಾಗಗಳಿನ್ನೂ ಅಲ್ಲಿಗೆ ಸರಬರಾಯಾಗಿಲ್ಲ. ಕಾರಣವೇನು?

ಶ್ರೀ ಕೊಂಡಜ್ಜಿ ಬಸಪ್ಪ.—ಇದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ಒದಗಿಸಲಾಗುವುದು.

ಶ್ರೀ ಗಂಗಾಧರ ನಾಮೋಷಿ.—ಈ ವ್ಯವಹಾರದಲ್ಲಿ ಯಾವ ಸೊಸೈಟಿಯೂ ಲಾಭ ಹೊಂದಿಲ್ಲ ಎಂದರೆ ಅದನ್ನು ತಾವು ನಂಬುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದರಲ್ಲಿ ಲಾಭ ಲುಕ್ಸಾನುಗಳನ್ನು ಕಾಣಬೇಕಾಗಿದ್ದರೆ ನಾಲ್ಕಾರು ವರ್ಷಗಳು ಕಳೆಯಬೇಕು. ಅಷ್ಟು ಬೇಗ ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ.

Sri SANJEEVANATH AIKALA.—Is it a fact that power looms have been supplied in South Kanara District 2½ years back and that the motors required have arrived just a few months back and that current has not been supplied. Consequently motors could not be connected to the power looms in South Kanara District.

Mr. SPEAKER.—The question relates to Mandya District.

ಶ್ರೀ ಬಿ. ಎಲ್. ಗೌಡ.—(ಉ)ಗೆ ಉತ್ತರವಾಗಿ ಕೊಟ್ಟಿರುವ 44 ಸೊಸೈಟಿಗಳ ಹೈಕಿ ಹೋದ ವರ್ಷ ಎಷ್ಟು ಆಡಿಟ್ ಆಗಿವೆ ಮತ್ತು ಎಷ್ಟು ಲಾಭದಾಯಕವಾಗಿವೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ಮಾಹಿತಿ ಈಗ ನನ್ನಲ್ಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—(ಈ)ಗೆ ಉತ್ತರವಾಗಿ ವಿದ್ಯುಚ್ಛಾಲಿತ ಮಗ್ಗಗಳ ಬೆಲೆ 3,22,500 ರೂಪಾಯಿಗಳು ಎಂಬುದಾಗಿ ಹೇಳಿದ್ದೀರಿ. ಆ ಹಣ ಎಲ್ಲಿದೆ ? ಹೆಗ್ಗಣಗಳಿಂದ ಅದು ಪೋಲಾಗಿದೆಯೇ ? ಅದರಿಂದೇನಾದರೂ ಬಡ್ಡಿ ಬರುತ್ತಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಪವರ್‌ಲೂಮ್ಸ್ ಎಷ್ಟು ಬೆಲೆಯುಳ್ಳದ್ದು ಎಂಬುದಕ್ಕೆ ಉತ್ತರವನ್ನು ಒಣಗಿಸಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಸೊಸೈಟಿಗಳಲ್ಲಿ ಪ್ರತಿಯೊಂದಕ್ಕೂ ಸರ್ಕಾರದವರು ಕೊಟ್ಟಿರುವ ತಕ್ಕ ಷೇರು ಮೊಬಲಗು ಎಷ್ಟು ?

ಶ್ರೀ ಕೊಂಡಜ್ಜಿ ಬಸಪ್ಪ.—ಪ್ರತಿಯೊಂದು ಸೊಸೈಟಿಗೂ 87 ರೂಪಾಯಿ ಮತ್ತು 50 ಹೈಸೆ.

ಶ್ರೀ ಕೆ. ಲಕ್ಕಪ್ಪ.—ಈ ಸೊಸೈಟಿಗಳ ಪೈಕಿ ಎಷ್ಟು ಸೊಸೈಟಿಗಳನ್ನು ಆಡಿಟ್ ಮಾಡಲಾಗಿದೆ ? ಆರೀತಿ ಆಡಿಟ್ ಮಾಡಿದ ಮೇಲೆ ಎಷ್ಟು ಹಣ ದುರುಪಯೋಗವಾಗಿದೆ ಎಂಬುದೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು ಗೊತ್ತಿಲ್ಲ. ಅವರ ಪ್ರಶ್ನೆ ಇದಕ್ಕೆ ಸಂಬಂಧ ಪಟ್ಟಿಲ್ಲ.

ಶ್ರೀ ಎನ್. ನಂಜೇಗೌಡ.—ಕಿಕ್ಕೇರಿಗೆ ಮಗ್ಗಗಳನ್ನು ಸಪ್ಲೈಮಾಡಿ ಎಷ್ಟು ದಿನಗಳಾಗಿರಬಹುದು ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಮಾಹಿತಿ ಈಗ ನನ್ನಲ್ಲಿಲ್ಲ. ಕಿಕ್ಕೇರಿಗೆ 20 ಅಲಾಟ್ ಆಗಿಪೆ. ಈಗ ಹಾಲಿ 8 ಕೆಲಸಮಾಡುತ್ತಿವೆ.

ಶ್ರೀ ಕೆ. ಎಚ್. ರಂಗನಾಥ್.—ಈ ಸಹಕಾರ ಸಂಘಗಳಿಗೆ ಆರ್ಟ್ ಸಿಲ್ಕ್ ಸಪ್ಲೈ ಮಾಡಿದ್ದಾರೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅಲ್ಲಿಗೆ ಒಂದೇ ಒಂದು ಸಿಲ್ಕ್ ಸೊಸೈಟಿಯನ್ನು ಕೊಟ್ಟಿದ್ದೇವೆ.

Mr. SPEAKER.—I would invite the attention of the Minister for Health that names have been mentioned in the reply to this question No. 58 though the member concerned has not asked for the same.

———

Regularisation of Services of Teachers working under the erstwhile District Board High School now under the control of Taluk Boards in South Kanara District.

*Q.—67. Sri B. BHASKAR SHETTY (Kaup).—

Will the Government be pleased to state :—

(*a*) whether they are aware of any cases in South Kanara District where the erstwhile District Board High School teachers, presently under the control of Taluk Boards, who had put in more than two years of continuous service are not made permanent contrary to the Local Body Rules, denying them the benefit of annual increment, teachers provident fund, etc ;

(*b*) if so, why they have not been made permanent and given the benefit of increment, etc ;

(*c*) whether the new scale of pay is applicable to those teachers ;

(*d*) if so, whether they are drawing their salaries at present in the new scale ;

(*e*) if not, why ?

A.—Sri S. R. KANTHI (Minister for Education).—

(*a*) Yes.

(*b*) Their services are to be regularised in the first instance.

(*c*) Yes.

(*d*) No.

(*e*) *Vide* reply to '*b*' above.

ಶ್ರೀ ಬಿ. ಭಾಸ್ಕರಶೆಟ್ಟಿ.—ಜಿಲ್ಲಾ ಮಂಡಲಿಯ ಪ್ರೌಢಶಾಲೆಗಳಲ್ಲಿ ಎರಡು ವರ್ಷಗಳಿಗೂ ಮೇಲ್ಪಟ್ಟು ಕೆಲಸಮಾಡಿದ್ದರೂ ಇನ್ನೂ ಖಾಯಂ ಆಗದೆ ಇರುವ ಉಪಾಧ್ಯಾಯರುಗಳ ಸಂಖ್ಯೆ ಯೆಷ್ಟು ?